ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಲೋಕಲ್) ದಿನಗೂಲಿ ಹುದ್ದೆಗಳನ್ನು ನೇಮಿಸುವ ಬಗ್ಗೆ

2107: ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1989ರಿಂದ 1993ರ ಜನವರಿವರೆಗೆ ಎಷ್ಟು ದಿನಗೂಲಿ:ಹಂಗಾಮಿ ಕೆಲಸಗಾರರನ್ನು ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ವೇತನ ಶ್ರೇಣಿಗಳ ವಿವರ;

ಆ. ಸಾಲುವಾರು ಹೆಸರು, ಉದ್ಯೋಗ ಮತ್ತು ವೇತನ ಶ್ರೇಣಿಗಳ ವಿವರ;

ಇ. ಇವರಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರು ಎಷ್ಟು;

ಈ. ನೇಮಕಾತಿ ಅಧಿಕಾರಿ ಮತ್ತು ಯಾವ ನಿಯಮಾವಳಿಗಳ ಪ್ರಕಾರ ನೇಮಕಾತಿ ಮಾಡಲಾಗಿದೆ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ. ಇಲ್ಲ.

ಆ. ಅನ್ವಯಿಸುವುದಿಲ್ಲ.

ಇ. ಅನ್ವಯಿಸುವುದಿಲ್ಲ.

ಈ. ಅನ್ವಯಿಸುವುದಿಲ್ಲ.

ಶ್ರೀ ಕೆ. ಸಿದ್ದಯ್ಯ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸ್ವಲ್ಪ ಮರೆತು ಬಿಟ್ಟಿದ್ದಾರೆಂದು ಕಾಣುತ್ತದೆ. 1989ರಿಂದ 1993ನೇ ವಾರ್ಷಿಕ ವರದಿಯಲ್ಲಿ ಹೇಳಿದ್ದಾರೆ. ಅದರಲ್ಲಿ ಆಡಿಟರ್ಸ್ ಅಬ್ಸರ್ವೇಷನ್ಸ್ ಇದೆ. ದಯಮಾಡಿ, ಅದನ್ನು ತರಿಸಿ ನೋಡಿ ಸರಿಪಡಿಸುತ್ತೀರಾ ? ಆ ರಿಮಾರ್ಕ್ಸ್‌ನಲ್ಲಿ ಇದೆಯೆಂದು ನನಗೆ ಜ್ಞಾಪಕ, ನಾನು ಅದನ್ನು ಹುಡುಕಿದೆ, ಅದು ಸಿಗಲಿಲ್ಲ. ತಾವು, ತಮ್ಮ ಡಿಪಾರ್ಟ್‌ಮೆಂಟಿನಿಂದ ತರಿಸಿ ನೋಡಿ, ಇದನ್ನು ಸರಿಪಡಿಸುತ್ತೀರಾ ?

ಶ್ರೀ ಚೌಡರೆಡ್ಡಿ:– ದಾವಣಗೆರೆ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ 1989ರಿಂದ 1993 ರವರೆಗೆ ದಿನಗೂಲಿ ಮೇಲೆ ಯಾರನ್ನೂ ತೆಗೆದುಕೊಂಡಿಲ್ಲ.

ಶ್ರೀ ಕೆ. ಸಿದ್ದಯ್ಯ:– ಆ ರಿಪೋರ್ಟ್‌ನಲ್ಲಿ ಆಡಿಟರ್ಸ್ ರಿಮಾರ್ಕ್ಸ್ ಇದೆ. ತಮ್ಮ ಡಿಪಾರ್ಟ್‌ಮೆಂಟ್‌ನಿಂದ, ದಯಮಾಡಿ ನೋಡಿ.

ಶ್ರೀ ಚೌಡರೆಡ್ಡಿ:– ಆಡಿಟ್ ರಿಪೋರ್ಟ್‌ನಲ್ಲಿದ್ದರೆ, ತಮ್ಮನ್ನು ಕರೆಸಿ ಮಾತನಾಡುತ್ತೇನೆ.

ಮಂಡ್ಯ ನಗರಕ್ಕೆ ಕುಡಿಯುವ ನೀರಿನ ಸರಬರಾಜು ಕುರಿತು

2185: ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮಂಡ್ಯ ನಗರಕ್ಕೆ ಕುಡಿಯುವ ನೀರಿನ ಸರಬರಾಜು ಮಾಡುವ ಕಾವೇರಿ 2ನೇ ಹಂತದ ಯೋಜನೆಯು ಮಂಜೂರಾಗಿದೆಯೇ;

ಆ. ಹಾಗಿದ್ದಲ್ಲಿ ಇದರ ವಿವರಗಳೇನು;

ಇ. ಈ ಯೋಜನೆಯು ಎಂದಿನಿಂದ ಅನುಷ್ಠಾನಕ್ಕೆ ಬರುವುದು;

ಈ. ಮಂಡ್ಯ ನಗರದ ಒಳಚರಂಡಿ ಯೋಜನೆಯನ್ನು ಪೂರ್ಣಗೊಳಿಸಲಾಗಿದೆಯೇ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ. ಹೌದು.

ಆ. ಸಂಖ್ಯೆ:ಹೆಚ್‌ಯುಡಿ 641 ಯುಡಬ್ಲ್ಯುಎಸ್ 90, ದಿನಾಂಕ 3–4–92 ರಲ್ಲಿ ರೂ.1360.00 ಲಕ್ಷಗಳಿಗೆ ಈ ಕೆಳಕಂಡ ಆರ್ಥಿಕ ವ್ಯವಸ್ಥೆಯಂತೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

1.	ಜೀವವಿಮಾ ನಿಗಮದ ಸಾಲ	ರೂ.680.00 ಲಕ್ಷ
2.	ಸರ್ಕಾರದ ಸಾಲ	ರೂ.340.00 ಲಕ್ಷ
3.	ಮಂಡ್ಯ ನಗರಸಭೆ ಪಾಲು	ರೂ.340.00 ಲಕ್ಷ
	ಒಟ್ಟು	ರೂ.1360.00 ಲಕ್ಷ

ಇ. ಈ ಯೋಜನೆಯನ್ನು 1995–96ರ ಸಾಲಿನಲ್ಲಿ ಚಾಲ್ತಿಗೊಳಿಸಲು ಉದ್ದೇಶಿಸಲಾಗಿದೆ.

ಈ. ಒಳಚರಂಡಿ ಗ್ರಾಮಸಾರ ಶುದ್ಧೀಕರಣಗಾರರ ಕಾಮಗಾರಿಯ ಹೊರತು ಮಿಕ್ಕೆಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಶುದ್ಧೀಕರಣಗಾರದ ಕಾಮಗಾರಿಯು ಪ್ರಗತಿಯಲ್ಲಿದೆ.

ಶ್ರೀ ಎಂ.ಎಸ್. ಆತ್ಮಾನಂದ:– ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರಕ್ಕೆ ಕುಡಿಯುವ ನೀರಿನ 2ನೇ ಹಂತದ ಯೋಜನೆ ಮಂಜೂರಾಗಿರುವ ಬಗ್ಗೆ 3–4–90ರಲ್ಲಿ ಸರ್ಕಾರ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಈ ಯೋಜನೆಯ ತಿನುಷ್ಠಾನ 1995–96ನೇ ಇಸವಿಯಲ್ಲಿ ಬರುತ್ತದೆಂದು ಹೇಳಿದ್ದಾರೆ. ಮೊದಲನೆ ಹಂತದ ಕೆಲಸವನ್ನು 1974ರಲ್ಲಿ ಕಾರ್ಯಗತಗೊಳಿಸಲಾಯಿತು. ಮಂಡ್ಯ ಟೌನ್ ಆಗಿದ್ದಾಗ ಆ ಯೋಜನೆಯ ಅಂದಾಜನ್ನು ತಯಾರು ಮಾಡಿದ್ದರು. ಈಗ ಮಂಡ್ಯ ನಗರ ಸಭೆಯಾಗಿ, ನಗರವಾಗಿ ಸುಮಾರು 1 ಲಕ್ಷ 50 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಪ್ರದೇಶವಾಗಿದೆ. ಈಗಾಗಲೇ ನಾವು ಕುಡಿಯುವ ನೀರಿನ ತೊಂದರೆಯನ್ನು ಅನುಭವಿಸುತ್ತಿದ್ದೇವೆ. ಈ ಯೋಜನೆಯನ್ನು ಅತಿ ಶೀಘ್ರವಾಗಿ ಅನುಷ್ಠಾನ ಮಾಡಲಿಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂದು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಚೌಡರೆಡ್ಡಿ:– ಸನ್ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರದಲ್ಲಿ ನೀರಿಗೆ ತೊಂದರೆ ಇರತಕ್ಕಂಥ ವಿಚಾರ ತಮಗೂ ಗೊತ್ತಿದೆ. ಇದಕ್ಕೆ ಒಂದು ಯೋಜನೆಯನ್ನು ಕೂಡ ತಯಾರು ಮಾಡಿದ್ದೇವೆ. ಆ ಯೋಜನೆಗೆ 1360 ಲಕ್ಷ ರೂಪಾಯಿ ಅಂದಾಜು ತಯಾರು ಮಾಡಿದ್ದೇವೆ. ಆ ಯೋಜನೆಗೆ ಬೇಕಾದಂಥಾದ್ದು ಸಿ.ಎಂ.ಸಿ. ಮಂಡ್ಯ ಶೇರು 340 ಲಕ್ಷ. ಅದಕ್ಕೆ 10 ಲಕ್ಷ ರೂಪಾಯಿಯನ್ನು ಕೊಟ್ಟಿದ್ದಾರೆ. 10 ಲಕ್ಷ ರೂಪಾಯಿಗೆ ಮೇಲ್ಪಟ್ಟ ಯೋಜನೆಯಾದರೆ ಅದನ್ನು ಸೆಂಟ್ರಲ್ ಗೌರ್ನ್‌ಮೆಂಟಿಗೆ ಕಳುಹಿಸಬೇಕಾಗುತ್ತದೆ. ಅದರಂತೆ ನಾವು ಸೆಂಟ್ರಲ್ ಗೌರ್ನಮೆಂಟಿಗೆ ಕಳುಹಿಸಿದ್ದೇವೆ. ಎಲ್.ಐ.ಸಿ. ಮತ್ತು ಹುಡ್ಕೋನಿಂದ ಲೋನ್ ತೆಗೆದುಕೊಳ್ಳಬೇಕಾದರೆ ಅವರಿಂದ ಕ್ಲಿಯರೆನ್ಸ್ ಬೇಕಾಗುತ್ತದೆ. ಮೊನ್ನೆ ನಾವು ಒಂದು ಕಾನ್‌ಫರೆನ್ಸ್‌ಗೆ ಹೋಗಿದ್ದಾಗ ಇದರ ಬಗ್ಗೆ ಪ್ರಯತ್ನ ಮಾಡಿದ್ದೇವೆ. ಏಪ್ರಿಲ್‌ನಲ್ಲಿ ಇದಕ್ಕೆ ಅಂತಿಮವಾಗಿ ಸೆಂಟ್ರಲ್ ಗೌರ್ನ್‌ಮೆಂಟ್‌ನಿಂದ ಕ್ಲಿಯರೆನ್ಸ್ ಬರುತ್ತಿದೆ. ಈ ಮಧ್ಯೆ ಸ್ವಲ್ಪ ಕೆಲಸಗಳನ್ನು ಶುರು ಮಾಡುತ್ತಿದ್ದೇವೆ. ಲೋಕಪಾವನಿ ರಿವರ್ ಹತ್ತಿರ ಬ್ರಿಡ್ಜ್ ಮಾಡುವುದು ಹಾಗೂ ಮದರ್ ಟ್ಯಾಂಕ್ ಒಂದು, 50 ಲಕ್ಷದ ಟ್ರೀಟ್‌ಮೆಂಟ್ ಪ್ಲಾಂಟ್ ಒಂದು, ಈ ತರಹ ಎಲ್ಲಾ

ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ನಾವು ನಿಧಾನ ಮಾಡುತ್ತಿಲ್ಲ. ಅದು ಬಂದ ತಕ್ಷಣ ಕೆಲಸ ಶುರು ಮಾಡುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ:– ಅಧ್ಯಕ್ಷರೇ, ಈ ಒಳಚರಂಡಿ ಯೋಜನೆ ಸಹ ಆಷ್ಟೇ, ಅನೇಕ ಹೊಸ ಬಡಾವಣೆಗಳಲ್ಲಿ ಮತ್ತು ಮಂಡ್ಯ ನಗರ ಸಭೆಯ ಸುತ್ತ ಇರುವ ಗ್ರಾಮಗಳಲ್ಲಿ ಒಳಚರಂಡಿ ಯೋಜನೆ ಕೈಬಿಟ್ಟುಹೋಗಿದೆ. ಇದರ ಬಗ್ಗೆ 2ನೇ ಹಂತದ ಒಳಚರಂಡಿ ಯೋಜನೆ ಕೈಗೊಳ್ಳಲಿಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ಕೇಳುತ್ತೇನೆ.

ಶ್ರೀ ಚೌಡರೆಡ್ಡಿ:– ಒಳ ಚರಂಡಿ ಯೋಜನೆಯ ಕೆಲಸ ನಡೆಯುತ್ತಿದೆ. ಆದರಲ್ಲಿ ಎರಡು ಟ್ರೀಟ್‌ಮೆಂಟ್ ಪ್ಲಾಂಟ್‌ಗಳಲ್ಲಿ ಒಂದು ಟ್ರೀಟ್‌ಮೆಂಟ್ ಪ್ಲಾಂಟನ್ನು 1993ನೇ ಅಕ್ಟೋಬರ್ ಒಳಗೆ ಕಟ್ಟುತ್ತಿದ್ದೇವೆ. ಇನ್ನೊಂದಕ್ಕೆ ಜಾಗದ ಬಗ್ಗೆ ಗಲಾಟೆ ಬಿದ್ದಿದೆ. ಅದರ ಬಗ್ಗೆ ಡಿ.ಸಿ.ಯವರ ಹತ್ತಿರ ಈಗ ಫೈಲ್ ಇದೆ. ಅದನ್ನು ತಾವು ಬೇಗ ಮಾಡಿಸಿ.

ಶ್ರೀ ಎಂ.ಎಸ್. ಆತ್ಮಾನಂದ:– ನಾನು ಕೇಳುತ್ತಿರುವುದು ಹೊಸ ಬಡಾವಣೆಗಳು ಮತ್ತು ಏನು ಕೆಲವು ಗ್ರಾಮಗಳು ಸೇರಿವೆ. ಅಲ್ಲಿ ಒಳ ಚರಂಡಿ ಸೌಲಭ್ಯ ಇಲ್ಲ. ಆ ಸೌಲಭ್ಯವನ್ನು ಯಾವಾಗ ದೊರಕಿಸಿಕೊಡುತ್ತೀರಿ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಕೆಲವು ಬಡಾವಣೆಗಳ ಅಂದಾಜು ಮಾಡಿ ಕಳುಹಿಸಿಕೊಡಲಾಗಿದೆ. ಅದನ್ನು ದಯವಿಟ್ಟು ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಚೌಡರೆಡ್ಡಿ:– ಯಾವುದು ತಪ್ಪಿ ಹೋಗಿದೆಯೋ ಅದನ್ನು ಸರ್ವೆ ಮಾಡಿಸಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಕರ್ನಾಟಕ ರಾಜ್ಯ ರೇಷ್ಮೆ ಕೈಗಾರಿಕಾ ನಿಗಮವು ನಷ್ಟವನ್ನು ಅನುಭವಿಸುತ್ತಿರುವ ಬಗ್ಗೆ

2184: ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):– ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಕರ್ನಾಟಕ ರಾಜ್ಯ ರೇಷ್ಮೆ ಕೈಗಾರಿಕಾ ನಿಗಮವು ನಷ್ಟದಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

2. ಬಂದಿದ್ದಲ್ಲಿ, ಕಳೆದ ಎರಡು ವರ್ಷಗಳಲ್ಲಿ ಉಂಟಾಗಿರುವ ನಷ್ಟವೆಷ್ಟು; ಘಟಕ (ಯೂನಿಟ್) ವಾರು ವಿವರಗಳನ್ನು ಕೊಡುವುದು.

ವರ್ಷಗಳು	ಜೂಟು ರೇಷ್ಮೆ ಗಿರಣಿ, ಚೆನ್ನಪಟ್ಟಣ	ಕೇಂದ್ರ ಉಗ್ರಾಣ, ಚನ್ನಪಟ್ಟಣ
1990–91	(177.42)	(13.38)
1991–92	(88.34)	(11.56)

(ಅವರಣಮೊಳಗಿರುವ ಅಂಕಿಗಳು ನಷ್ಟದ ಬಗ್ಗೆ ಸೂಚಿಸುತ್ತವೆ);

3. ಈ ಉದ್ದಿಮೆಗಳನ್ನು ಬಲಪಡಿಸಲು ಸರ್ಕಾರವು ಏನಾದರೂ ಕ್ರಮಗಳನ್ನು ತೆಗೆದುಕೊಂಡಿದೆಯೇ;